| ವಿಧಾನ ಪರಿಷತ್ತು | |
|---|---|
| ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ | 1015 (1111) |
| ಸದಸ್ಯರ ಹೆಸರು | ಶ್ರೀ ಎಂ ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 17-03-2025 |
| ಉತ್ತರಿಸುವವರು | ಮಾನ್ಯ ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕರ್ನಾಟಕ ರಾಜ್ಯ ಅರಣ್ಯ ಇಲಾಖೆ ವತಿಯಿಂದ 2019 ರಿಂದ 2023 ರವರೆಗೆ ಎಷ್ಟು ಅರಣ್ಯ ಅಪರಾಧ ಪ್ರಕರಣಗಳನ್ನು (ಎಫ್. ಓ.ಸಿ) ದಾಖಲಿಸಿದೆ. | ಕರ್ನಾಟಕ ರಾಜ್ಯದಲ್ಲಿ 2019 ರಿಂದ 2023ರವರೆಗೆ ಅರಣ್ಯ ಅತಿಕ್ರಮಣ ಪ್ರಕರಣ, ವನ್ಯಜೀವಿ ಪ್ರಕರಣ, ಮರ ಕಡಿದಿರುವ ಪ್ರಕರಣ ಮತ್ತು ಇತರ ಒಳಗೊಂಡಂತೆ ಒಟ್ಟು 24,583 ಅರಣ್ಯ ಅಪರಾಧ ಮೊಕದ್ದಮೆ ಪ್ರಕರಣಗಳು ದಾಖಲಾಗಿದ್ದು, ಈ ಪೈಕಿ ಒಟ್ಟು 14,418 ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿದೆ.<br>ರಾಜ್ಯದಲ್ಲಿ ಅರಣ್ಯ ಅಪರಾಧ ಪ್ರಕರಣಗಳಲ್ಲಿ ರಾಜಿದಂಡ ವಿಧಿಸಿ ವಿಲೇಗೊಳಿಸಬಹುದಾದ ಪ್ರಕರಣಗಳನ್ನು ಸಂಬಂಧಿಸಿದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಂದ ನಿಯಮಾನುಸಾರ ಅಗತ್ಯ ಕ್ರಮ ಜರುಗಿಸಿ ಪ್ರಕರಣಗಳನ್ನು ವಿಲೇಗೊಳಿಸಲಾಗುತ್ತಿದೆ.<br>ಆದಾಗ್ಯೂ ಅರಣ್ಯ ಅಪರಾಧ ಪ್ರಕರಣಗಳಲ್ಲಿ 10,165 ಪ್ರಕರಣಗಳು ಅರಣ್ಯ ಅತಿಕ್ರಮಣ/ವನ್ಯಜೀವಿ ಪ್ರಕರಣಗಳಿಗೆ ಸಂಬಂಧಿಸಿದ್ದು, ಸದರಿ ಪ್ರಕರಣಗಳಲ್ಲಿ ಮಾನ್ಯ ನ್ಯಾಯಾಲಯ ಹಂತದಲ್ಲಿ ವಿಲೇಗೊಳಿಸಬೇಕಾಗಿರುವುದರಿಂದ ಪ್ರಕರಣಗಳು ಬಾಕಿ ಇರುತ್ತವೆ. |
| ಆ | ಈ ಅವಧಿಯಲ್ಲಿ ಅರಣ್ಯ ಭೂಮಿಗಳ ಅತಿಕ್ರಮಣ, WLP ಕಾಯ್ದೆಯಡಿಯಲ್ಲಿರುವ ಪ್ರಕರಣಗಳು, ಅನಧಿಕೃತವಾಗಿ ಮರಗಳನ್ನು ಕಡಿಯುವುದು, ಇತರೆ (ಅರಣ್ಯ ಉತ್ಪನ್ನಗಳ ಅಕ್ರಮ ಸ್ವಾಧೀನ/ ಸಾಗಣೆ ಸೇರಿದಂತೆ) ಗಳನ್ನು ಒಟ್ಟು 2541 ಅರಣ್ಯ ಅಪರಾಧ ಪ್ರಕರಣಗಳನ್ನು ದಾಖಲಿಸಿದ್ದು, ಅದರಲ್ಲಿ ಕೇವಲ ನ್ಯಾಯಾಲಯದಿಂದ 22 ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿದ್ದು ನಿಜವೇ; ಇದ್ದಲ್ಲಿ, ಉಳಿದ ಪ್ರಕರಣಗಳು ವಿಲೇವಾರಿ ಆಗದೇ ಇರುವುದಕ್ಕೆ ಕಾರಣಗಳೇನು; | |
| ಇ | ಬಹುತೇಕ ಪ್ರಕರಣಗಳಲ್ಲಿ ವಲಯ ಅರಣ್ಯಾಧಿಕಾರಿಗಳಿಂದ ವಿಚಾರಣಾ ವರದಿಗಳನ್ನು ಸಿದ್ಧಪಡಿಸದೇ ಇರುವುದರಿಂದ ಪ್ರಕರಣಗಳು ಬಾಕಿ ಉಳಿದಿರುವುದಕ್ಕೆ ಕಾರಣವಾಗಿದೆಯೇ; ಇದ್ದಲ್ಲಿ, ಇಂತಹ ಅಧಿಕಾರಿಗಳ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ರಾಜ್ಯದಲ್ಲಿ ಅರಣ್ಯ ಅಪರಾಧ ಪ್ರಕರಣಗಳನ್ನು ಗರುಡಾಕ್ಷಿ ತಂತ್ರಾಂಶದ ಮೂಲಕ ವಿಚಾರಣಾ ವರದಿಗಳನ್ನು ದಾಖಲಿಸಲಾಗುತ್ತಿದ್ದು, ಇನ್ನು ಆರಂಭಿಕ ಹಂತದಲ್ಲಿ ಕಾರ್ಯಾನುಷ್ಠಾನಗೊಳಿಸಲಾಗಿದೆ.<br>ಇದರಿಂದ ದಾಖಲಾಗುವ ಅರಣ್ಯ ಅಪರಾಧ ಪ್ರಕರಣಗಳನ್ನು ತ್ವರಿತವಾಗಿ ವಿಲೇವಾರಿ ಮಾಡಲು ಸಾಧ್ಯವಾಗುತ್ತದೆ. ಮುಂದುವರೆದು, ಅರಣ್ಯ ಅಪರಾಧ ಪ್ರಕರಣಗಳಲ್ಲಿ ಬಾಕಿ ಇರುವ ವಿಚಾರಣಾ ವರದಿಗಳನ್ನು ಸಲ್ಲಿಸಿ ಪ್ರಕರಣಗಳನ್ನು ವಿಲೇಗೊಳಿಸಲು ಅಗತ್ಯ ಕ್ರಮ ಜರುಗಿಸಲು ಸೂಚಿಸಲಾಗಿರುತ್ತದೆ. |

ಸಂಖ್ಯೆ: ಅಪಜೀ 24 ಎಫ್ಎಸ್‌ಡಬ್ಲ್ಯೂ 2025

Belaadi

**(ಈಶ್ವರ ಬಿ. ಖಂಡ್ರೆ)**

ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು